ವಾಹನ ಚಳಿಗೆ ಕಂಪಿಸುತ್ತಿತ್ತು. ಇವರಿಬ್ಬರು ನನ್ನನ್ನು ಎಲ್ಲಿಗೆ ಕರೆದೊಯ್ಯುವರೊ ಏನೋ... ನೋಡೇ ಬಿಡುವ ಎಂದು ಅರೆನಿದ್ದೆಯಲ್ಲಿ ಕನವರಿಸುತ್ತಿತ್ತು. ನೂರಾರು ಹೆಣಗಳು ಮಲಗಿದ್ದ ಸ್ಟ್ರೆಚ್ಚರ್‌ನಲ್ಲಿ ತಾಯ ತೊಟ್ಟಿಲಲ್ಲಿ ಜೋಗುಳ ಆಲಿಸುತ್ತಾ ನಿದ್ರಿಸುವಂತೆ ಕುಂಟ, ಕನಸಿನ ಏಳೇಳು ಲೋಕಗಳಲ್ಲಿ ಅಡ್ಡಾಡುತ್ತಿದ್ದ. ಸಾವು ಬಂದು ಇಬ್ಬರನ್ನೂ ಮೂಸಿ ನೋಡಿ ಅದು ಕೂಡ ತೂಕಡಿಸುತ್ತಿತ್ತು. ಅವರ ಕಾಲವೇ ಒಂದು ವಾಹನವಾಗಿ ವೇಗವಾಗಿ ನಿದ್ದೆಯಲ್ಲಿದ್ದ ಅವರನ್ನು ಹೊತ್ತುಕೊಂಡು ಹೋಗಿ ಇನ್ನೆಲ್ಲೋ ಎಸೆದಿತ್ತು. ಬೆಳಕಾಗಿತ್ತು. ತಾವು ಇಲ್ಲಿಗೆ ಹೇಗೆ ಬಂದು ತಲುಪಿದೆವು... ಈ ಗಾಡಿಯೇ ತಂತಾನೆ ಕರೆದುಕೊಂಡು ಬಂತೇ ಎಂದು ಸವಾರ ಎದ್ದು ಕೂತ. 'ಕನಸಲ್ಲ ಅಣ್ಣಾ... ಈ ಜಾಗವ ನಾವೆಂದೂ ಕಂಡೇ ಇರಲಿಲ್ಲ... ಇದೆಂಗಾಯ್ತಣ್ಣಾ... ಭೂಮಿ ಸುತ್ತುತ್ತಿದೆಯಲ್ಲಾ... ಭೂಮಿ ನಮ್ಮನ್ನು ಈ ಕಡೆ ಕರೆದುಕೊಂಡಿರಬಹುದೇನೋ... ಇದೆಲ್ಲ ಮಾಯೆ ಅಣ್ಣಾ...'

'ಎಂಥದ್ದೂ ಇಲ್ಲ. ನಮ್ಮ ಭ್ರಮೆ ಇರಬೇಕು...' 'ಗೊತ್ತಿಲ್ಲದ್ದು ಸತ್ಯ ಹೇಗಾಗುತ್ತೆ...' 'ಯೀ ಆಕಾಶ ನಿಜನೋ ಸುಳ್ಳೋ...' 'ನಿಜ ಕಣಯ್ಯಾ...' 'ಇದೂನು ಅಂಗೆನೇ... ಅನುಮಾನವೇ ಬೇಡ. ಮನುಷ್ಯ ತನ್ನ ಅನುಮಾನಗಳಿಂದಲೇ ಕೆಟ್ಟದ್ದು...' 'ಎಲ್ಲೆಲ್ಲಿನದೆಲ್ಲವ ತಂದು ಗೋಜಲು ಮಾಡಬೇಡ.' 'ನೋಡಣ್ಣಾ... ಭೂಮಿ ಕರ್ಕಂಡು ಬಂದಿದೆ ಎಂದು ನೀನೇ ಹೇಳ್ದೆ... ಅದು ಸತ್ಯ! ನಮಗೆ ಗೊತ್ತೇ ಆಗದಂತೆ ಸತ್ಯ ಬಂದು ಹೋಗುತ್ತಿರುತ್ತದೆ. ನಾವೇನು ಆಕಾಶವ ಅಳ್ತೆ ಮಾಡಿ ಮುಟ್ಟಿ ಬಂದಿದ್ದೇವೇನಣ್ಣಾ... ಅಂಗೆನೇ ಇದೆಲ್ಲ...'

'ಶವಗಳಿಗೂ ಬುದ್ಧಿ ಇದೆಯೇನಯ್ಯಾ...' 'ಇರಬಹುದು ಅಣ್ಣಾ... ಮಣ್ಣಲ್ಲಿ ಮಣ್ಣಾಗುವುದು ಶವಗಳಿಗೆ ಗೊತ್ತು. ಗೆದ್ದಲುಗಳೇ ಬನ್ನಿ ಎಂದು ಕರೆಯುವುದೇ ಹೆಣಗಳು...', 'ಯಾಕೋ ಭಯ ಆಗುತ್ತಲ್ಲ ನಿನ್ನ ಮಾತು ಕೇಳ್ತಿದ್ದರೆ. ಈ ತನಕ ನಾನು ಯಾವ ಒಂದು ಶವಕ್ಕೂ ಬೆದರಿದ್ದವನಲ್ಲ. ನೀನೊಂದು ಕುಂಟ ಅರೆ ಜೀವವೋ ಶವವೋ ಎಂದುಕೊಂಡಿದ್ದರೆ ಭೂತಪ್ರೇತ, ಪಿಶಾಚಿಗಳ ಪೂರ್ವಿಕನಂತೆ ಮಾತಾಡುತ್ತಿದ್ದೀಯಲ್ಲಾ...' ಎಂದು ಆಕಾಶದತ್ತ ನೋಡಿದ. ಒಂದೆರಡು ರಣಹದ್ದುಗಳು ಅವರ ತಲೆಯ ಮೇಲೆ ಸುತ್ತು ಹಾಕುತ್ತಾ ಸದ್ದು ಮಾಡುತ್ತಿದ್ದವು. ತಕ್ಷಣ ಮಾಯವಾಗಿ ಸ್ವಲ್ಪ ಹೊತ್ತಿನ ನಂತರ ರಣಕಾಟಿ ಹದ್ದುಗಳ ಹಿಂಡು ಬಂದಿಳಿದವು.

'ಏನಯ್ಯಾ... ಇವು ನಮ್ಮನ್ನೇ ಸತ್ತಪ್ರಾಣಿ ಎಂದು ಕೊಂಡವೇ...' ಎಂದು ಹಳೇ ಗುಜರಿಯಲ್ಲಿ ಸಿಕ್ಕಿದ್ದ ಬಂದೂಕ ಹೆಗಲಿಗೇರಿಸಿ ಗುರಿ ಇಟ್ಟ. 'ಬಿಡಣ್ಣಾ... ಅಲ್ಲಿ ನೋಡಣ್ಣಾ ಒಂಟೆ ಒಂದು ಸತ್ತು ಬಿದ್ದಿದ್ದೆ. ತಿನ್ನಲು ಬಂದಿವೆ. ಅವು ಬಹಳ ಒಳ್ಳೆಯ ಪಕ್ಷಿಗಳು. ಹೆಣಗಳಿಗೆ ಮುಕ್ತಿ ತೋರುತ್ತವೆ... ನಿನ್ನಂತೆಯೇ...' ಎಂದ.

ಏನು ಹೇಳುವುದೆಂದು ಸವಾರನಿಗೆ ತೋಚಲಿಲ್ಲ. ಕ್ಷಣಮಾತ್ರದಲ್ಲಿ ಒಂಟೆಯ ತಿಂದು ಎಲುಬಿನ ಪಂಜರ ಮಾಡಿ ಭಾರವಾಗಿ ಹಾರಿಹೋದವು. ಈ ರಣಹದ್ದುಗಳು ನಮ್ಮನ್ನೂ ಹೀಗೆ ತಿಂದು ಬಿಡುತ್ತವೆ

